**ಚಾಸಾ-7 ಪ್ರಾಸಾ-4**

**3ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 14253/2014**

**ಚಾಸಾ-7 ಪ್ರಾಸಾ- 4**

| | |
|---|---|
| **ಸಾಕ್ಷಿದಾರರ ಹೆಸರು** | ಹೆಚ್.ವಿ. ವೆಂಕಟಾಚಲಯ್ಯ |
| **ತಂದೆಯ ಹೆಸರು** | ಲೇಟ್. ವೆಂಕಟರಮಣಪ್ಪ |
| **ವಯಸ್ಸು** | 61 ವರ್ಷ |
| **ಉದ್ಯೋಗ** | ನಿವೃತ್ತ ಪಿಐ, |
| **ವಾಸ** | ಹೆಸರುಘಟ್ಟ. |
| **ಪ್ರಮಾಣೀಕರಿಸಿದ ದಿನಾಂಕ** | 11.07.2024. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ದಿ.11.09.2013 ರಿಂದ ದಿ.09.02.2014 ರವರೆಗೆ ಆರ್ ಎಂ ಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಪಿಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.11.09.2013 ರಂದು ಈ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-6 ರವರಿಂದ ಪಡೆದುಕೊಂಡು ದಿ.25.10.2013 ರಂದು ಮತ್ತು ದಿ.28.11.2013 ರಂದು ಆರೋಪಿಗೆ ನೋಟಿಸ್ ಕೊಟ್ಟಿರುತ್ತೇನೆ, ಆದರೆ ಆರೋಪಿ ಹಾಜರಾಗಿರುವುದಿಲ್ಲ. ನಂತರ ಈ ಕೇಸಿನ ಕಡತವನ್ನು ಪರಿಶೀಲಿಸಿ ತನಿಖೆ ಮುಗಿದಿದ್ದರಿಂದ ದಿ.12.01.2014 ರಂದು ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲು : ಶ್ರೀ. ಕೆ ವಿ ಎಸ್ ವಕೀಲರಿಂದ ಆರೋಪಿ ಪರ**

ನಾನು ನೋಟಿಸ್ ಕೊಟ್ಟಾಗ ಆರೋಪಿ ಬಂದು ಮೂಲ ಡಿಜ್ಯೂಲುಷನ್ ಡೀಡ್ ಮತ್ತು ಪಾರ್ಟನರ್ ಶೀಪ್ ಡೀಡ್ ಗಳನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಅವುಗಳನ್ನು ಕೊಟ್ಟಿದ್ದರು ಸಹ ನಾನು ಅವುಗಳನ್ನು ತೆಗೆದುಕೊಂಡು ಎಫ್ ಎಸ್ ಎಲ್ ಗೆ ಕಳುಹಿಸಲಿಲ್ಲ ಎಂದರೆ ಸರಿಯಲ್ಲ. ಅದೇ ಪೊಲೀಸ್ ಠಾಣೆಯಲ್ಲಿ ಆರೋಪಿ ದೂರುದಾರರ ವಿರುದ್ದ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಎನ್.ಸಿ ಆರ್ ನಂ.230/2012 ನೇ

**ಚಾಸಾ-7 ಪ್ರಾಸಾ-4**

ದಲ್ಲಿ ದೂರು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ದೂರುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರರು ಆರೋಪಿಯ ಸ್ವಂತ ಅತ್ತೆ ಎಂದರೆ ನನಗೆ ಗೊತ್ತಿಲ್ಲ. ಎಪಿಎಂ ಸಿ ಯಲ್ಲಿ ಒಂದು ಅಂಗಡಿ ಗೆ ಮಾತ್ರ ಪರವಾನಿಗೆ ಕೊಡುತ್ತಿದ್ದು ಇನ್ನೊಂದು ಅಂಗಡಿಗೆ ಪರವಾನಿಗೆ ಕೊಡುತ್ತಿರಲಿಲ್ಲ ಆ ಕಾರಣಕ್ಕಾಗಿ ಇನ್ನೊಂದು ಅಂಗಡಿಗೆ ಪರವಾನಿಗೆ ತೆಗೆದುಕೊಳ್ಳಲು ಡಿಜ್ಯೂಲುಷನ್ ಡೀಡ್ ಮಾಡಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2007 ರಲ್ಲಿ ಆರೋಪಿ ಮತ್ತು ದೂರುದಾರರು ಸೇರಿ ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ನೋಟಿಸ್ ಕೊಟ್ಟಾಗ ಸಾಲದ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಎಮ್.ಎಮ್.ನ್ಯಾ.**
**ಬೆಂಗಳೂರು.**